

## ಭೂತಾಯಿ

ನನ್ನೂರ ಮಣ್ಣಿನ ದಾರ್‍ಯಾಗ
ನನ್ನವ್ವನ ಹೆಜ್ಜೆ ಗುರುತು
ಪ್ರತಿ ಮುಂಜಾನೆ ಸೂರ್ಯನಿಗಿಂತ ಮೊದಲೇ
ಉದಯಿಸುವ ಅವ್ವನಿಗೂ
ದಣಿವೆನ್ನುವುದಿಲ್ಲ ಅವನಂತೆಯೇ

ಮನೆಗೆಲಸ ಮುಗಿಸುವಳು
ಗದ್ದೆಯೆಡೆಗೆ ಸಾಗುವಳು
ಸಂಜೆಯಾಗುತ್ತಲೇ
ತನ್ನ ಕರುಳ ಕುಡಿಗಳಿಗೆ
ಹಣ್ಣು–ಕಾಯಿ ಕಟ್ಟಿಕೊಂಡು ಉಡಿಯಲ್ಲಿ
ಹಸಿ ಹುಲ್ಲು ಹೊತ್ತು ತಲೆಯ ಮ್ಯಾಲೆ
ಊರ ದಾರಿ ಹಿಡಿವಳು

ಭೂತಾಯಿಯಂತೆಯೇ ನನ್ನವ್ವ
ಅವಳನ್ನ ನಂಬಿದವರಿಗೆಲ್ಲ
ಉಪವಾಸ–ವನವಾಸ ಎನ್ನುವುದಿಲ್ಲ
ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಂತೆಯೇ
ಕೊಟ್ಟಿಗೆಯ ದನಗಳ ಮೇಲೂ
ಮಮತೆಗರೆಯುವ ಹಡೆದವ್ವ

**ಸುವರ್ಣ ಸಿ.ಎಂ.**

## ಅವ್ವ

ತಿಳಿದಿಲ್ಲ ಯಾರಿಗೂ ಬರಿಗಾಲಲಿ
ಗುಡ್ಡಗಾಡು ತಿರುಗಿ ಕಪ್ಪು ನೆಲ
ಮಡಿಲಲ್ಲಿ ಬೀಜವಾಗಿ ಬಿದ್ದು
ಸುರಿಯುವ ಮಳೆಯಲ್ಲೆ ಸಂಭ್ರಮಿಸಿದವಳು

ಸೂರ್ಯನ ಜೊತೆಗೇರಿ ರೆಂಬೆ ಕೊಂಬೆಯ
ಚಿಗುರಿಸಿ ನಂಬಿದವರಿಗೆ ನೆರಳಾಗಿ
ಹಸುವಿಗೆ ಹಸಿ ಮೇವು ತಂದು
ಮನೆಯ ಹಾಲಿನಲಿ ಕೆನೆಯಾದವಳು

ಅವಳಿಗಿಲ್ಲ ಬೇಸರ ದಣಿವು
ಕರುಳ ಬಳ್ಳಿಯನು ಎದೆಗಪ್ಪಿ ಹಾಲುಣಿಸಿ
ಬೆಳಗಿನ ಜಾವ ಪಡಿ ಜೋಳ ಬೀಸಿ
ರೊಟ್ಟಿ ಬುತ್ತಿ ಕಟ್ಟಿ ಹಂಚಿದವಳು

ಹಬ್ಬ ಹರಿದಿನ ಗೊತ್ತಿಲ್ಲ ಅವಳಿಗೆ
ಸೀರೆ ಕುಪ್ಪಸ ಒಡವೆ ಬೇಡಲಿಲ್ಲ
ಮಳೆಇರಲಿ ಚಳಿಇರಲಿ ಗಾಣದೆತ್ತಿನಂತೆ
ಮೌನದಲಿ ಕನಸುಗಳ ಮರೆತು ನಡೆದವಳು

**ಬಸವರಾಜ ಜಿ ಕನ್ನೂರ**